ಮುಕುಂದ, ಮಾಧವ. ತನಗೆ ಇಬ್ಬರು. ರಮೇಶ, ರಾಧಿಕಾ. ವಾಸುದೇವನ ಹೆಂಡತಿ ಗೀತ ತನ್ನ ತಂಗಿಯೇ. ಅವರಿಗೆ ಒಂದು ಮಗು. ಐದು ವರ್ಷದ ಪ್ರದೀಪ. ಎಲ್ಲರೂ ಹಾಸ್ಯ ಮಾಡಿದ್ದಾರೆ.

ರಮೇಶ ಮತ್ತು ರಾಧಿಕಾ ದುಃಖದಿಂದ, ಬೇಸರದಿಂದ ತನ್ನಲ್ಲಿ ಹೇಳಿಕೊಂಡಿದ್ದಾರೆ. ಎಲ್ಲರೂ ಹೇಳಿಯಾಯಿತು. ತಾನಂತೂ ಪ್ರತಿಯೊಂದು ವಿಧದಲ್ಲೂ ಹೇಳಿ ಪ್ರಯತ್ನಿಸಿಯಾಯಿತು. ಆತನ ಸ್ವಭಾವದಲ್ಲೇನೂ ಬದಲಾವಣೆ ಇಲ್ಲ. ಮದುವೆಯಾಗಿ ಹದಿನೆಂಟು ವರ್ಷಗಳಾದವು. ಇನ್ನೂ ಎಷ್ಟೊಂದು ಹೇಳುವುದು? ಸೋತು ಕೈಚೆಲ್ಲಿದ್ದಾಳೆ ರೋಹಿಣಿ. ಅತ್ತೆ ಮಾವಂದಿರಿಗೇ ತಿದ್ದಲು ಸಾಧ್ಯವಾಗಿಲ್ಲ!

ಹೌದು, ಶ್ರೀನಿವಾಸ ಮೊದಲಿನಿಂದಲೂ ಹೀಗೇ. ಚಿಕ್ಕ ಹುಡುಗನಾಗಿದ್ದಾಗ ಅವನ ಈ ಸ್ವಭಾವ ಕಂಡು ಸಂತೋಷಪಟ್ಟಿದ್ದರು ಸಾವಿತ್ರಮ್ಮ ಮತ್ತು ಕೇಶವರಾಯರು. ಉಳಿದ ಮಕ್ಕಳಿಗೆ ಅವನನ್ನು ತೋರಿಸಿ ಹಾಗಿರಬೇಕು ಎಂದು ಉದಾಹರಿಸಿದ್ದೂ ಉಂಟು. ಒಂದನೇ ತರಗತಿಯಲ್ಲಿ ಮಗನಿಗೆ ಕೇಶವರಾಯರು ಹೊಸ ಬ್ಯಾಗು ಕೊಡಿಸಿದ್ದು, ಆಮೇಲೆ ಎಂದಿಗೂ ಹೊಸ ಬ್ಯಾಗು ಕೇಳಿಲ್ಲ ಶ್ರೀನಿವಾಸ. ಅಣ್ಣನ ಹಳೆಯ ಬ್ಯಾಗು, ಪುಸ್ತಕ, ಪೆನ್ನು, ಪೆನ್ಸಿಲ್ ಎಲ್ಲವೂ ಆತನಿಗೆ. ಅಣ್ಣ ತಮ್ಮಂದಿರು 'ಹಳೇದಾಯ್ತು' ಎಂದು ಎಸೆಯುವ ವಸ್ತುಗಳನ್ನು ಕೊಂಚ ರಿಪೇರಿ ಮಾಡಿ 'ಚೆನ್ನಾಗಿದೆ' ಎಂದು ಬಳಸುತ್ತಿದ್ದ. 'ಇಲ್ಲದೇ ಇದ್ದಾಗ ಹೊಸದನ್ನು ಕೊಳ್ಳೋಣ, ಇರುವಾಗ ಯಾಕೆ ವೇಸ್ಟ್ ಮಾಡಬೇಕು?' ಎಂಬುದು ಅವನ ತರ್ಕ.

ರೋಹಿಣಿಯ ಮದುವೆ ಅವನೊಡನೆ ನಿಶ್ಚಯವಾದಾಗ ರೋಹಿಣಿಯ ತಂದೆ ಶ್ರೀಪತಿರಾಯರು ಹಿಗ್ಗಿದ್ದರು.

'ಬಂಗಾರದಂಥ ಅಳಿಯ ಕಣೇ' ಎಂದು ಹೆಂಡತಿಯೊಡನೆ ಹೇಳಿಕೊಂಡಿದ್ದರು. ಅದಕ್ಕೆ ಕಾರಣವೂ ಇದ್ದಿತು.

'ಛತ್ರ ಅಂತ ದುಡ್ಡು ದಂಡ ಮಾಡಬೇಡಿ. ನಿಮ್ಮ ಮನೆ ಹೇಗೂ ದೊಡ್ಡದಾಗಿದೆ. ಇಲ್ಲೇ ಮದುವೆ ನಡೆಯಲಿ. ಸುಮ್ನೆ ಯಾಕೆ ದುಂದು ವೆಚ್ಚ ಮಾಡಬೇಕು?'

ಹಿರಿಯ ಇಬ್ಬರು ಅಳಿಯಂದಿರ ತಾಳಕ್ಕೆ ಕುಣಿದು ದಣಿದಿದ್ದ ಅವರಿಗೆ ಈ 'ಉಳಿತಾಯ'ದ ಅಳಿಯ ಸಿಕ್ಕಿದ್ದು ಬಹಳ ಸಂತೋಷವಾಗಿತ್ತು. ರೋಹಿಣಿಯ ಸ್ಥಾನ ಮನೆಯಲ್ಲಿ ಕೊಂಚ ಮೇಲೇರಿತ್ತು. ಆದರೆ ಮದುವೆಯಾದ ಮೇಲೆ ಅಳಿಯನ ಸ್ವಭಾವದ ಪರಿಚಯವಾದಂತೆ ಮಿತವ್ಯಯ ಎಂಬ ಪದ ಹೋಗಿ ಕೈಬಿಗಿ ಅಳಿಯ ಎಂದು ಅವರು ಹೇಳುತ್ತಿದ್ದುದು ರೋಹಿಣಿಗೂ ತಿಳಿದಿತ್ತು. ಗಂಡನ ಈ ಸ್ವಭಾವದ ಬಗ್ಗೆ ಜಿಗುಪ್ಸೆಯಾಗುತ್ತಿತ್ತು.

ಅಕ್ಕಂದಿರ ಮದುವೆಯಾಗಿ ಮೊದಲ ವರ್ಷ ಪ್ರತಿ ತಿಂಗಳು ಮದುವೆಯ ತಾರೀಖಿಗೆ ಭಾವಂದಿರು ಹೆಂಡತಿಯರಿಗೆ ಏನಾದರೂ ಉಡುಗೊರೆ ತರುತ್ತಿದ್ದರು. ಅವುಗಳನ್ನು ತೋರಿಸಿ ಅಕ್ಕಂದಿರು ಪಡುತ್ತಿದ್ದ ಹೆಮ್ಮೆ ಕಂಡು ರೋಹಿಣಿ ತನಗೇ ಅರಿವಿಲ್ಲದಂತೆ ಕನಸು ಕಾಣುತ್ತಿದ್ದಳು. ಆದರೆ ವಾಸ್ತವ ಬಹಳ ಕಹಿಯಾಗಿತ್ತು. ಉಡುಗೊರೆಯಿರಲಿ, ಒಂದು ಮೊಳ ಹೂವನ್ನೂ ತರಲಿಲ್ಲ ಶ್ರೀನಿವಾಸ.

'ಒಂದೇ ಹೊತ್ತಿಗೆ ಬಾಡಿ ಹೋಗುವ ಆ ಹೂವಿಗೇಕೆ ದುಡ್ಡು ದಂಡ ಮಾಡೋದು?'

ಅವನ ಮಾತು ಕೇಳಿ ತಲೆ ಚಚ್ಚಿಕೊಳ್ಳುವಂತಾಗಿತ್ತು ರೋಹಿಣಿಗೆ. ಉಳಿದವರ ಜರ್ಬಾದ ಜೀವನದೊಂದಿಗೆ ತನ್ನದನ್ನು ಹೋಲಿಸಿಕೊಂಡು ಒಳಗೇ ಕೊರಗುತ್ತಿದ್ದಳು ರೋಹಿಣಿ.

ತನ್ನ ತಂಗಿ ಗೀತಳನ್ನು ಮೈದುನ ವಾಸುದೇವ ಮೆಚ್ಚಿ ಮದುವೆಯಾಗಿದ್ದ. ವಾಸುದೇವನಿಗೂ